ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಬಗ್ಗೆ ಸೂಕ್ತವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್.ಗೋಪಾಲ ಭಂಡಾರಿ : ಅವರು ಪಾಸಿಟಿವ್ ಆಗಿ ಉತ್ತರವನ್ನು ಕೊಡಲಿ.

ಶ್ರೀ ಎಸ್.ಸುರೇಶ್ ಕುಮಾರ್ : ಆಯಿತು.

ಅಧ್ಯಕ್ಷರು : ಶ್ರೀ ಯು.ಟಿ.ಖಾದರ್‌ರವರೆ ತಾವು ಕೇಳಿ.

6. ವಿಷಯ : ಆಶಾ ಕಾರ್ಯಕರ್ತರ ವಿವಿಧ ಬೇಡಿಕೆಗಳ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು ಉತ್ತರ) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಸರ್ಕಾರವು ಆಶಾ ಕಾರ್ಯಕರ್ತರನ್ನು ನೇಮಕ ಮಾಡಿದೆ. ಬಹುಶಃ ಅವರ ಜೀವನವು ಹೇಗಿದೆ ಎಂದು ಹೇಳಿದರೆ ಅವರು ದುಡಿದಿರುವುದಕ್ಕೆ ಏನಾದರೂ ಸಿಕ್ಕಬೇಕದರೆ ಯಾರು ಇವತ್ತು ಗರ್ಭಿಣಿ ಸ್ತ್ರೀಯರು ಇದ್ದಾರೆ ಅವರನ್ನು ಪ್ರಪ್ರಥಮವಾಗಿ ಪ್ರಾರಂಭದಿಂದ 9 ತಿಂಗಳವರೆಗೆ ನೋಡಿಕೊಂಡು ಅವರಿಗೆ ಮತ್ತೆ ಹೆರಿಗೆಯಾದ ನಂತರ ಒಂದು ಮಗುವಿಗೆ ರೂ.200.00 ಗಳು ಸಿಗುವಂತಹದ್ದು. ಮತ್ತು ಮಗುವನ್ನು ಒಂದು ವರ್ಷದ ನಂತರ ಇಂಜಕ್ಷನ್ ತೆಗೆದುಕೊಳ್ಳುವುದಕ್ಕೆ ಹೋದ ನಂತರ ಮತ್ತೆ ಅದಕ್ಕೆ 100.00 ರೂಪಾಯಿಗಳು ಸಿಗುವಂತಹದ್ದು. ಅದೇ ರೀತಿಯಾಗಿ ಬಾಣಂತಿಯರಿಗೆ 40 ದಿವಸಗಳು ಆದನಂತರ ಮತ್ತೆ ನೋಡಿಕೊಳ್ಳಲು 100.00 ರೂಪಾಯಿಗಳನ್ನು ಕೊಡುವಂತಹದ್ದು. ಈ ರೀತಿಯಾಗಿ incentive ಕೊಡುವ ಮೂಲಕ ಅವರು ಜೀವನ ಸಾಗಿಸುವಂತಹ ಪರಿಸ್ಥಿತಿ ಇದೆ. ಅವರಿಗೆ ಯಾವುದೇ ಸೂಕ್ತವಾದಂತಹ ಬೇಸಿಕ್ ಗೌರವಧನವೂಕೂಡ ಇಲ್ಲ. ಇದರಿಂದ ಅವರಿಗೆ ಎಷ್ಟು ಕಷ್ಟವಾಗುತ್ತದೆ ಎಂದು ನಾವು ಆಲೋಚನೆಯನ್ನು ಮಾಡಬೇಕಾಗಿದೆ. ನಾವು ಹೆಣ್ಣು ಮಕ್ಕಳಿಗೆ ಅಲ್ಲಿ ಕೆಲಸವನ್ನು ಕೊಡುತ್ತೇವೆ. ಅವರುಗಳು ಗ್ರಾಮ ಗ್ರಾಮಕ್ಕೆ ನಡೆದುಕೊಂಡು ಹೋಗಬೇಕಾಗಿರುತ್ತದೆ. ಗ್ರಾಮಕ್ಕೆ ಹೋಗುವುದಕ್ಕೆ ಸರಿಯಾದ ವ್ಯವಸ್ಥೆಗಳು ಇರುವುದಿಲ್ಲ. ಬೆಳಿಗ್ಗೆಯಿಂದ ಸಂಜೆಯ ತನಕ ಒಂದೊಂದು ಮನೆಗೆ ಹೋಗಬೇಕಾದರೆ ನಡೆದುಕೊಂಡು ಹೋಗುವಂತಹ

ಪರಿಸ್ಥಿತಿ ಇದೆ. ಬೇರೆ ಬೇರೆ ಬೇಡಿಕೆಯನ್ನು ಇಟ್ಟು ಅವರು ಈಗ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಸರ್ಕಾರವು ಇವತ್ತು ಅವರಿಗೆ ಕಡೆಯ ಪಕ್ಷ ಬೇಸಿಕ್ ಆಗಿ ಗೌರವಧನವನ್ನು ನಿಗದಿಪಡಿಸಬೇಕು. ಅವರಿಗೆ incentive ಕೊಡುವುದು ಕೂಡ ಜಾಸ್ತಿಯಾಗಬೇಕಾಗಿದೆ. ಇದರ ಜೊತೆಯಲ್ಲಿ ಏನು ಸಮಸ್ಯೆ ಎಂದರೆ, ಅಲ್ಲಿ ಯಾರು ಗರ್ಭಿಣಿಯರು ಇದ್ದಾರೆ ಅವರು 8 ತಿಂಗಳ ಕಾಲ ಮನೆಯಲ್ಲಿಯೇ ಇರುತ್ತಾರೆ. ಹೆರಿಗೆ ಆಗುವ ಸಮಯದಲ್ಲಿ ಅವರು ತಾಯಿಯ ಮನೆಗೆ ಹೋಗುತ್ತಾರೆ. ಮತ್ತೆ ಇವರ incentive cut ಆಗುತ್ತದೆ. ಅಲ್ಲಿ ಸಣ್ಣಪುಟ್ಟ technical ಸಮಸ್ಯೆಗಳು ಇವೆ. ಅವರು ಸ್ವಾಭಿಮಾನದಿಂದ ಜೀವನ ಮಾಡುವುದಕ್ಕೆ ಅವಕಾಸವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತು ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಆರ್.ಅಶೋಕ್ (ಉಪಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಆಶಾ ಕಾರ್ಯಕರ್ತರ ವಿವಿಧ ಬೇಡಿಕೆಗಳ ಬಗ್ಗೆ ಪ್ರತಿಭಟನೆ ಮಾಡುತ್ತಿರುವುದು. ಅವರಿಗೆ ನಮ್ಮ ಪೊಲೀಸರಿಂದ ಏನೂ ತೊಂದರೆಯಾಗಿರುವುದಿಲ್ಲ. ಅವರ ಕೆಲವು ಬೇಡಿಕೆಗಳು ಏನಿವೆ ಅವುಗಳನ್ನು ಈಡೇರಿಸಬೇಕೆಂದು ನಾನು ಈ ಹಿಂದೆ ಆರೋಗ್ಯ ಸಚಿವನಾಗಿ ಕೆಲಸವನ್ನು ಮಾಡಿದ್ದೇನೆ. ಆ ಸಂದರ್ಭದಲ್ಲಿ ಆಶಾ ಕಾರ್ಯಕರ್ತರನ್ನು ನೇಮಕ ಮಾಡಿದ್ದೆವು. ಅವರ ಸಮಸ್ಯೆಗಳು ಏನಿವೆ ಎಂಬ ಬಗ್ಗೆ ನಾನು ಮಾನ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರವು ಕೂಡಲೇ ಕ್ರಮವನ್ನು ಕೈಗೊಳ್ಳುತ್ತದೆ.

ಅಧ್ಯಕ್ಷರು : ಶ್ರೀ ಸೈಯದ್ ಯಾಸೀನ್‌ರವರು ಸದನದಲ್ಲಿಲ್ಲ. ಶ್ರೀ ಸುನೀಲ್ ಹೆಗಡೆಯವರೆ ತಾವು ಕೇಳಿ.

7. ವಿಷಯ : ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ.

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಉತ್ತರ ಕನ್ನಡ